International Journal of Kannada Research
www.kannadajournal.com

**ISSN: 2454–5813**
IJKR 2019; 5(2): 68-72
© 2019 IJKR
www.kannadajournal.com
Received: 07-02-2019
Accepted: 09-03-2019

**Yogindra V**
Department Education,
Dravidian University,
Kuppam, Andra Pradesh, India

**Correspondence**
**Yogindra V**
Department Education,
Dravidian University,
Kuppam, Andra Pradesh, India

# ಚಿಕ್ಕಲೂರು ಜಾತ್ರೆಯ ಬಾಡೂಟದ ಪಂಕ್ತಿಸೇವೆ

**Yogindra V**

ಕರ್ನಾಟಕದಲ್ಲಿ ಅಸಂಖ್ಯಾತ ಜಾತ್ರೆಗಳು ನಡೆಯುತ್ತವೆ. ಒಂದು ಎರಡು ದಿನದಿಂದ ಹಿಡಿದು ಹತ್ತಾರು ದಿನಗಳವರೆಗೆ ಈ ಜಾತ್ರೆಗಳು ನಡೆಯುತ್ತವೆ. ಇವುಗಳಲ್ಲಿ ಮಂಟೇಸ್ವಾಮಿಯ ಪ್ರಿಯ ಶಿಷ್ಯನೂ ತಳ ಸಂಸ್ಕೃತಿಯ ಜನರ ಆರಾಧ್ಯ ದೇವನೂ ಆದ ಸಿದ್ದಪ್ಪಾಜಿಗೆ ನಡೆಯುವ ಚಿಕ್ಕಲ್ಲೂರು ಜಾತ್ರೆಯು ನಾನಾ ಕಾರಣಗಳಿಂದ ವೈಶಿಷ್ಟ್ಯಪೂರ್ಣವಾದುದು.
ಮಂಟೇಸ್ವಾಮಿಯ ಪ್ರಿಯ ಶಿಷ್ಯನೂ ಒಂದರ್ಥದಲ್ಲಿ ಸಾಂಸ್ಕೃತಿಕ ಬಂಡಾಯಗಾರನೂ ಆದ ಸಿದ್ದಪ್ಪಾಜಿಯ ಪುಣ್ಯ ಕ್ಷೇತ್ರವೇ ಚಿಕ್ಕಲ್ಲೂರು. ಸುಮಾರು 16ನೇ ಶತಮಾನದಲ್ಲಿ ಕಂಡುಬರುವ ಸಾಂಸ್ಕೃತಿಕ ಬಂಡಾಯದ ಪ್ರತಿಫಲ ಈ ಸಿದ್ದಪ್ಪಾಜಿ. ಮೇಲುವರ್ಗದ ಸಿರಿವಂತರ ಕುಟುಂಬದಲ್ಲಿ ಹುಟ್ಟಿ ಬೆಳೆದು ಯೌವನಾವಸ್ಥೆಯಲ್ಲಿ, ಅಹಂಕಾರದಲ್ಲಿ ಇದ್ದ ಈತನಿಗೆ ಮಂಟೇಸ್ವಾಮಿಯೆಂಬ ಸಾಂಸ್ಕೃತಿಕ ಮಹಾಬಂಡಾಯಗಾರ ಬದುಕಿನ ನಿಜ ಮೌಲ್ಯವನ್ನು ತಿಳಿಸಿ ಸರ್ವಜನರನ್ನು ಪ್ರೀತಿಸುವಂತೆ ಮಾಡಿ ಜಾತಿ–ಮತ ಭೇದವಿಲ್ಲದೆ ಎಲ್ಲಾ ಜಾತಿಗಳಿಂದಲೂ ಪೂಜೆಗೊಳ್ಳುವಂತಾಗುವಂತೆ ಮಾಡಿದ್ದು ಸೋಜಿಗದ, ಅಷ್ಟೇ ರೋಚನಿಯವಾದ ಕಥಾನಕ.

ಏಳೇಳು ಲೋಕವನ್ನು ಆಳಿ ಬಾಳಿ ಬಂದೊ
ಬರುವಾಗ ಬೇಕಾದಷ್ಟು ಶಿಷ್ಯ ಮಕ್ಕಳ
ಮಾಡಿಕೊಂಡು ಬಂದೊ
ಅಲ್ಲೆಲ್ಲು ಇಂಥ ಶಿಶುಮಗ
ನಮಗೆ ದೊರೆಯಲಿಲ್ಲ ಕಣರಯ್ಯ
ಗುರುಪಾದಕೆ ಒಪ್ಪಿದ ಶಿಷ್ಯ
ನೀ ಒಬ್ಬನೇಯ ಕಾಣಿರಯ್ಯ
ಅಪ್ಪ ಪೂಜೆ ದೇವರು ನಾವು ಕಾಣೊ
ಮೆರೆಯೊ ದೇವರು ನೀವು ಕಾಣೊ
ಕೂತು ಪಟ್ಟ ನಮ್ಮದು
ದಳವಾಯಿ ಪಟ್ಟ ನಿಮ್ಮದಯ್ಯ
ಮಾರಿಹೊಕ್ಕ ಊರಿಗೆ ನಿಜಗುರು ಘನಲೀಲೆ
ಚಂಡಿಗೆ ನೀ ಗಂಡ
ಚಾಮುಂಡಿಗೆ ಬಲದವನೇ
ಎಲ್ಲಮ್ಮ ಏಕನಾತಿಗೆ
ನೀ ಮೊದಲ ಗಂಡ ಮಾಯಕಾರ
ದುರ್ಗೀರ ಮುಂಡೇರ ಯಾರಾದರೂ
ನಿಮ್ಮ ಮಾತ ಮೀರಿದರೆ
ಉರಸಂಗಿ ಕೊರಡಲ್ಲಿ
ಒಂದೊಂದು ಎಳೆತ ಎಳೆಯರಯ್ಯ[1]

ಮಂಟೇಸ್ವಾಮಿ ನೀಡಿದ ಶಿಷ್ಯತ್ವವನ್ನು ಸಿದ್ದಪ್ಪಾಜಿ ಅತ್ಯಂತ ಭಯ ಭಕ್ತಿಯಿಂದ ನಿರ್ವಹಿಸಿದಂತೆ ಕಂಡು ಬರುತ್ತದೆ. ಅಲ್ಲದೆ ದೀನ ದಲಿತರ ಸಾಂತ್ವಾನದ ಸಂತನಾಗಿ ಜನಸಾಮಾನ್ಯರ ಬಳಿಗೆ ತೆರಳಿರಬೇಕು. ಆ

ಕಾರಣದಿಂದ ಎಲ್ಲ ವರ್ಗದವರಿಗೂ ಅದರಲ್ಲಿಯೂ ಕೆಳವರ್ಗದವರಿಗೆ ಸಿದ್ದಪ್ಪಾಜಿ ನೆಚ್ಚಿನ ದೇವರಾಗುತ್ತಾನೆ.

ಇಂತಹ ಸಾಂಸ್ಕೃತಿಕ ನಾಯಕನಾದ ಸಿದ್ದಪ್ಪಾಜಿಗೆ ಚಿಕ್ಕಲ್ಲೂರಿನಲ್ಲಿ ಜನವರಿ ತಿಂಗಳಲ್ಲಿ ಜಾತ್ರೆ ನೆರವೇರುತ್ತದೆ. ಐದು ದಿನಗಳ ಕಾಲ ನಡೆಯುವ ಈ ಜಾತ್ರೆ ನಾನಾ ವೈಶಿಷ್ಟ್ಯಗಳನ್ನು ಹೊಂದಿದೆ. ಬಹಳ ಮುಖ್ಯವಾಗಿ ತಳ ಸಮುದಾಯದವರೇ ನಡೆಸುವ, ಪಾಲ್ಗೊಳ್ಳುವ ಈ ಜಾತ್ರೆ ಆ ಜನರ ಬದುಕಿನ ಆಚಾರ ವಿಚಾರಗಳ ಪ್ರತಿಬಿಂಬವಾಗಿದೆ. ಬಸವಣ್ಣನು ಅನುಸರಿಸಿದ, ಪ್ರಚುರಪಡಿಸಿದ ಶರಣ ಧರ್ಮವು ಕೇಳವರ್ಗದವರ ಉದ್ಧಾರಕ್ಕಾಗಿಯೇ ಬಂದುದು. ಪಟ್ಟಭದ್ರ ವ್ಯಕ್ತಿಗಳ ಕೈಗೆ ಸಿಕ್ಕ ಈ ಧರ್ಮಕ್ಕೆ ಬಸವನ ನಂತರ ಅನೇಕ ಚೌಕಟ್ಟುಗಳು ನಿರ್ಮಾಣವಾದವು. ಅಂತಹ ಸಂದರ್ಭದಲ್ಲಿ ಬಸವನ ಶರಣ ಧರ್ಮವನ್ನು ನಿಜವಾದ ಅರ್ಥದಲ್ಲಿ ಮುನ್ನಡೆಸಿಕೊಂಡು ಹೋದವರು ತಳ ಸಮುದಾಯದವರೇ. 'ಬಸವಪೂರ್ವಯುಗದ ಪ್ರಾಚೀನ ಶರಣಧರ್ಮದ ಮುನ್ನಡೆಗೆ ಕಾರಣಪುರುಷರೂ ನಂತರದ ತಲೆಮಾರಿಗೆ ಸ್ಮರಣಾರ್ಹರೂ ಆಗಿರುವ ಹಿರಿಯ ತಲೆಮಾರಿನ ಶರಣರೆಂದರೆ ಹುಲ್ಲು ಮಾರಿಕೊಂಡು, ಜೋಡು ಹೊಲಿದುಕೊಂಡು, ಮೀನು ಮಾರಿಕೊಂಡು ಅವರಿವರ ಬಟ್ಟೆ ಒಗೆದುಕೊಂಡು ಎಣ್ಣೆ ಅಥವಾ ಗಾಣ ಹೊಡೆದುಕೊಂಡು ಜೀವಿಸಿದ ಸಾಮಾನ್ಯರಲ್ಲಿ ಅತಿ ಸಾಮಾನ್ಯರೂ ಅಲ್ಲ, ಇವರು ಏನೇನೂ ಗತಿಯಿಲ್ಲದ ನಿರ್ಗತಿಕರು'[2] ಇಂತಹವರ ಪ್ರತಿರೂಪವಾಗಿ ಈ ಜಾತ್ರೆ ನಡೆಯುತ್ತದೆ. ಶರಣಧರ್ಮ ಮತ್ತು ತಳ ಸಂಸ್ಕೃತಿಯ ಪ್ರತೀಕವಾಗಿ ಚಿಕ್ಕಲ್ಲೂರು ಜಾತ್ರೆ ನಡೆಯುತ್ತದೆ. ಲಕ್ಷಾಂತರ ಜನ ಪಾಲ್ಗೊಳ್ಳುವ ಈ ಜಾತ್ರೆ ಸುತ್ತ ಮುತ್ತಲ ಪ್ರದೇಶಗಳಲ್ಲಿ ನಡೆಯುವ ಜಾತ್ರೆಗಳಲ್ಲಿಯೇ ಬಹಳ ಬೃಹತ್ ಮತ್ತು ಮಹತ್ ಆದುದು. ಇಂತಹ ವಿಜೃಂಭಣೆಯಿಂದ ನಡೆಯುವ ಚಿಕ್ಕಲ್ಲೂರು ಜಾತ್ರೆಯು 5 ದಿನಗಳ ಕಾಲ ನಡೆಯುತ್ತದೆ. ಪ್ರತಿದಿನವೂ ಒಂದೊಂದು ವಿಶೇಷತೆಗೆ ಹೆಸರುವಾಸಿಯಾಗಿದೆ. ಮೊದಲ ದಿನ – ಚಂದ್ರಮಂಡಲೋತ್ಸವ, ಎರಡನೆಯ ದಿನ – ಹುಲಿ ವಾಹನೋತ್ಸವ, ಕಂಡಾಯ, ಮೂರನೇ ದಿನ – ರುದ್ರಾಕ್ಷಿ ಮಂಟಪೋತ್ಸವ, ಮುಡಿ ಸೇವೆ ಮತ್ತು ನೀಲಗಾರ ದೀಕ್ಷೆ, ನಾಲ್ಕನೇ ದಿನ – ಪಂಕ್ತಿಸೇವೆ, ಪಲ್ಲಕ್ಕಿ, ಐದನೇ ದಿನ– ಮುತ್ತತ್ತಿರಾಯನ ಸೇವೆ ಹೀಗೆ ವಿಶಿಷ್ಟ ಆಚರಣೆಗಳೊಂದಿಗೆ ಜಾತ್ರೆಯ ಪ್ರತಿಯೊಂದು ದಿನವನ್ನು ವಿಶೇಷವಾಗಿಯೇ ಆಚರಿಸಲಾಗುತ್ತದೆ. ನಾಲ್ಕನೇ ದಿನ ನಡೆಯುವ ಸೇವೆ ಪಂಕ್ತಿ ಸೇವೆ. ಇದು ಈ ಜಾತ್ರೆಯ ಪ್ರಮುಖ ಆಚರಣೆ. ಈ ಪಂಕ್ತಿಸೇವೆಯಲ್ಲಿ ಮಾಂಸಾಹಾರವೇ ಪ್ರಾಧಾನ್ಯ.

ಆದರೆ ಬದಲಾದ ವ್ಯವಸ್ಥೆಯಲ್ಲಿ ಪ್ರಾಣಿಬಲಿ ನಿಷೇಧವನ್ನು ಇಲ್ಲಿಗೂ ಹೇರಿರುವ ಕಾರಣ ಈ ಪದ್ಧತಿಗೆ ಅಡ್ಡಿಯಾಗಿದೆ. ನ್ಯಾಯಾಲಯವು ನೇರವಾಗಿಯೇ ಚಿಕ್ಕಲೂರು ಜಾತ್ರೆಯಲ್ಲಿ ನಡೆಯುವ ಪ್ರಾಣಿಬಲಿಯನ್ನು ನಿಷೇಧಿಸಿ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆದೇಶಿಸಿದೆ. 2014 ರಲ್ಲಿ ಪ್ರಾಣಿದಯಾ ಸಂಘದವರು ಪ್ರಾಣಿ ಬಲಿ ನಿಷೇಧಿಸಬೇಕೆಂದು ಹೈಕೋರ್ಟ್ ಮೊರೆ ಹೋಗಿದ್ದರ ಪರಿಣಾಮ ನ್ಯಾಯಾಲಯ ಆದೇಶ ನೀಡಿದ್ದು, ಅಂತೆಯೇ ಜಿಲ್ಲಾಡಳಿತವು ಕ್ರಮ ಕೈಗೊಂಡಿದೆ. ಈ ಕಾರಣದಿಂದ ಬಹಳ ವಿಜೃಂಭಣೆಯಿಂದ ವ್ಯಾಪಕವಾಗಿ ನಡೆಯುತ್ತಿದ್ದ ಬಾಡೂಟದ ಪಂಕ್ತಿಸೇವೆ ಕಳೆದ ನಾಲ್ಕೈದು ವರ್ಷಗಳಿಂದ ಕಡಿಮೆಯಾಗುತ್ತಾ ಬರುತ್ತಿದೆ. ಸಸ್ಯಾಹಾರವನ್ನೇ ಪಂಕ್ತಿಗೆ ಬಡಿಸಿ ಸೇವೆ ಸಲ್ಲಿಸುವ ಭಕ್ತರು ಪರಂಪರೆಗೆ ವ್ಯವಸ್ಥೆ ಅಡ್ಡಿಯಾಗಿರುವುದರ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾರೆ.

ಪಂಕ್ತಿ ಸೇವೆ ಎಂಬುದು ಒಂದು ಸಾಂಸ್ಕೃತಿಕ ಪರಿಕಲ್ಪನೆ. 12ನೇ ಶತಮಾನದಲ್ಲಿ ಬಸವಣ್ಣ ಸಮಾನತೆಯ ಸಮಾಜದ ನಿರ್ಮಾಣಕ್ಕಾಗಿ ಕಂಡುಕೊಂಡ ಬಹು ದೊಡ್ಡ ಮಾರ್ಗ ಸಹಪಂಕ್ತಿ ಭೋಜನ: ಅದರೊಂದಿಗೆ ಆಕಸ್ಮಿಕವಾಗಿ ನಡೆದು ಹೋದ ಅಂತರ್ಜಾತಿ ವಿವಾಹ. ಅಂಬೇಡ್ಕರರು ತಮ್ಮ ಚಿಂತನೆಯಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಸಹಪಂಕ್ತಿಭೋಜನ ಮತ್ತು ಅಂತರಜಾತಿಯ ವಿವಾಹ ಪ್ರಮುಖ ಅಸ್ತ್ರಗಳೆಂದು ಪ್ರತಿಪಾದಿಸುತ್ತಾರೆ. 12ನೇ ಶತಮಾನದಲ್ಲಿಯೇ ಕಂದಾಚಾರಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಪ್ರಬಲವಾಗಿದ್ದ ಕಾಲದಲ್ಲಿ ಈ ಎರಡು ಮಾರ್ಗಗಳನ್ನು ಕಾರ್ಯರೂಪಕ್ಕೆ ತಂದವನು ಬಸವಣ್ಣ. ಈ ಮಾರ್ಗಗಳು ಸುಲಭವಾದುವಲ್ಲ. ಇಡೀ ವ್ಯವಸ್ಥೆಯನ್ನು ಎದುರು ಹಾಕಿಕೊಳ್ಳಬೇಕಾದ ಚಿಂತನೆಗಳು. ಮೇಲುವರ್ಗ ಮತ್ತ ಕೆಳವರ್ಗ ಎರಡೂ ಕೂಡ ಇದಕ್ಕೆ ವಿರೋಧವನ್ನೇ ವ್ಯಕ್ತ ಪಡಿಸುತ್ತವೆ. ಮೇಲು ವರ್ಗದವರು ತಮ್ಮ ಧರ್ಮ ಹಾಳಾಗುತ್ತದೆ ಎಂದು ವಿರೋಧಿಸಿದರೆ ಕೆಳವರ್ಗದವರು ತಮ್ಮ ನಂಬಿಕೆ, ಸಂಪ್ರದಾಯ, ಸನಾತನ ಆಚರಣೆಗಳಿಗೆ ನಾವು ವಿರುದ್ಧವಾಗಿ ನಡೆದುಕೊಂಡು ತಪ್ಪು ಮಾಡುತ್ತಿದ್ದೇವೆಂದು ವಿರೋಧಿಸುತ್ತಾರೆ. ಈ ವಿಷಯದಲ್ಲಿ ಮೇಲುವರ್ಗದವರನ್ನು ಈ ಚಿಂತನೆಯ ನೆಲೆ ಕರೆತರುವುದು ಸುಲಭವಲ್ಲ. ಆದರೆ ಕೆಳವರ್ಗದವರಿಗೆ ಅರಿವನ್ನು ನೀಡಿ ಹೊಸ ಮಾರ್ಗದತ್ತ ಹೊಯ್ಯಬೇಕಾಗುತ್ತದೆ. ಅದಕ್ಕಾಗಿಯೇ ಬಸವಣ್ಣ ಎದುರಿಸಬೇಕಾಗಿ ಬಂದ ತೊಂದರೆಗಳನ್ನು ಇತಿಹಾಸ ದಾಖಲಿಸಿಕೊಂಡಿದೆ. ಕಲ್ಯಾಣದಲ್ಲಿ ಇದರ ಪರಿಣಾಮ ಕ್ರಾಂತಿಯೇ ನಡೆದು ಹೋಯಿತೆಂದರೆ ಅವುಗಳ ಪ್ರಾಬಲ್ಯ ಪರಿಣಾಮ ಎಷ್ಟಿರಬಹುದೆಂಬುದನ್ನು ಊಹಿಸಬಹುದು.

ಬಸವಣ್ಣನು ಕಟ್ಟ ಬಯಸಿದ ಸಮಾಜದಲ್ಲಿ ಮೇಲು – ಕೀಳು, ಬಡವ – ಬಲ್ಲಿದ, ಸ್ತ್ರೀ – ಪುರುಷ ಭೇದವಿರಲಿಲ್ಲ, "ಶಿವಶರಣರು ಅಂದಿನ ಸಮಾಜದಲ್ಲಿ ಮೇಲು ಕೀಳು ಎಂಬ ಮಾತಿಗೆ ಅಂಟಿದ್ದ ತಾರತಮ್ಯ ಭಾವನೆಯನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಆ ಮೂಲಕ ಎಲ್ಲ ಬಗೆಯ ಅಸಮಾನತೆಯನ್ನು ನಿರ್ಮೂಲನೆಗೊಳಿಸಿ ಸಮಗ್ರವೂ ಸ್ವತಂತ್ರವೂ ಆದ ಸಮಾಜ ನಿರ್ಮಾಣವಾಗಬೇಕೆಂದು ಹಂಬಲಿಸಿದರು"[3] ಇಂತಹ ಸ್ವತಂತ್ರ ಮತ್ತು ಸಮಗ್ರ ಸಮಾಜ ಶೋಷಣೆ ಮುಕ್ತ ಮತ್ತು ಬಹುರುಚಿ ಆಧಾರಿತವಾಗಿತ್ತು. ಅದಕ್ಕಾಗಿ ಎಲ್ಲರೂ ಒಂದೆಡೆ ಸೇರುತ್ತಾರೆ. ಅಂದು ಧರ್ಮ ಮತ್ತು ದೇವರ ಹೆಸರಿನಲ್ಲಿ ಹೆಚ್ಚಾಗಿ ಶೋಷಣೆಗಳು ನಡೆಯುತ್ತಿದ್ದುದರಿಂದ ಅದರ ಬಗ್ಗೆಯೇ ಚಿಂತನೆಗಳನ್ನು ನಡೆಸುತ್ತಿದ್ದರು. ಜೊತೆಗೆ ಎಲ್ಲರೂ "ಮಹಾಮನೆ" ಎಂಬ ಬೃಹತ್ ಜಾತ್ಯಾತೀತ ಧರ್ಮಾತೀತ ವೇದಿಕೆಯಲ್ಲಿ ಸೇರಿ ಪ್ರಸಾದ ಸ್ವೀಕರಿಸುತ್ತಿದ್ದರು. ವಾಸ್ತವವಾಗಿ ಇದುವೆ 'ಪಂಕ್ತಿಭೋಜನ'. ಇಂದಿಗೂ ಹಲವು ಮಠಗಳಲ್ಲಿ ಪಂಕ್ತಿಭೋಜನ ಕಾಣುತ್ತೇವೆ. ಯಾವುದೇ ಬೇಧವಿಲ್ಲದೆ ಎಲ್ಲರೂ ಒಟ್ಟಿಗೆ ಸೇರಿ ಊಟ ಮಾಡುತ್ತಾರೆ. ಈ ವ್ಯವಸ್ಥೆ ಹಲವು ಮಠಗಳಲ್ಲಿ ಅದರಲ್ಲಿಯೂ ಬಸವತತ್ವವನ್ನು ಅಳವಡಿಸಿಕೊಂಡಿರುವ, ಆ ಸಾಂಸ್ಕೃತಿಕ ವಲಯದಲ್ಲಿ ಬರುವ ಮಠಗಳು ಅಳವಡಿಸಿಕೊಂಡು ಬಂದಿವೆ. ಸಿದ್ದಗಂಗಾ ಮಠವನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು. ಅದರಲ್ಲಿಯೂ ಮುಖ್ಯವಾಗಿ ಮಂಟೇಸ್ವಾಮಿ ಸಿದ್ದಪ್ಪಾಜಿ ಸಂಪ್ರದಾಯದಲ್ಲಿ 'ಪಂಕ್ತಿಸೇವೆ' ಎಂತಲೇ ಇದಕ್ಕಾಗಿ ಒಂದು ಆಚರಣಾ ಸೇವೆಯ ವಿಧಾನವನ್ನು ಇಟ್ಟುಕೊಂಡಿರುವುದು ವಿಶೇಷವಾದುದು.

ಬಸವಣ್ಣನ ಪಂಕ್ತಿಭೋಜನದಲ್ಲಿ ಬಹುಶಃ ಮಾಂಸಾಹಾರಕ್ಕೆ ಅವಕಾಶವಿರಲಿಲ್ಲ. ಬಸವಣ್ಣ ಆಹಾರ ವಿಷಯದಲ್ಲಿ ಸಸ್ಯಾಹಾರ ಮಾಂಸಾಹಾರ ಕುರಿತು ಚಿಂತನೆ ನಡೆಸುವುದಿಲ್ಲ. ಆದರೆ ಪ್ರಾಣಿಬಲಿ ಮತ್ತು ಪ್ರಾಣಿಗಳನ್ನು ಕೊಲ್ಲುವುದನ್ನು ಆತನ ಕೆಲವು ವಚನಗಳಲ್ಲಿ ವಿರೋಧಿಸಲಾಗಿದೆ. ಅಲ್ಲಿ ಎಲ್ಲರೂ ಅಂದರೆ ಮಾಂಸಾಹಾರಿಗಳೂ ಸಸ್ಯಾಹಾರಿಗಳೂ ಒಟ್ಟಿಗೆ ಸೇರುತ್ತಿದ್ದರಿಂದ ಜೊತೆಗೆ ನೇತೃತ್ವ ವಹಿಸಿದ್ದ ಬಸವಣ್ಣನು ಸಸ್ಯಾಹಾರಿಯೇ ಆಗಿದ್ದ ಕಾರಣದಿಂದ ಅಲ್ಲಿ

ಸಸ್ಯಾಹಾರ ನಡೆಯುತ್ತಿತ್ತು. ಮುಂದೆ ಬಸವಣ್ಣನ ಶರಣ ಸಂಪ್ರದಾಯದಲ್ಲಿ ಸೇರಿದ ಹಲವರು ಬಸವಣ್ಣನ ತತ್ವಗಳನ್ನು ಪಾಲಿಸಿದರೂ ತಮ್ಮ ತಮ್ಮ ಆಹಾರ ಸಂಸ್ಕಾರ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಂತೆ ಕಾಣುತ್ತದೆ. ಅಂತೆಯೇ ಮಾಂಸಾಹಾರಿ ಸಂಸ್ಕೃತಿಯ ನೆಲೆಯಿಂದ ಬಂದವರು ಪಂಕ್ತಿಭೋಜನದಲ್ಲಿ ಮಾಂಸಾಹಾರವನ್ನೇ ಬಳಸುತ್ತಾ ಬಂದರು. ಅದರ ಪ್ರಯುಕ್ತ ಚಿಕ್ಕಲ್ಲೂರಿನಲ್ಲಿ ಮಾಂಸಾಹಾರ ಮಾಡಿ ನೀಡುವುದೇ ಪಂಕ್ತಿಸೇವೆ ಆಗಿದೆ. ಮಾಂಸಾಹಾರ ವರ್ಜ್ಯವಲ್ಲ. ಅದನ್ನು ಹಿಂಸೆ ಅಹಿಂಸೆಯ ನೆಲೆಗೆ ತಂದರೆ ಪ್ರಾಣಿ ಸಂಕುಲದ ಸೃಷ್ಟಿ, ಆಹಾರ ಕ್ರಮದ ಬಗ್ಗೆಯೇ ಅವಲೋಕನ ಮಾಡಬೇಕಾಗುತ್ತದೆ. ಆಹಾರ ಕ್ರಮ ಒಂದು ಸೃಷ್ಟಿ ಧರ್ಮವಾಗಿದೆ ಎಂಬುದನ್ನು ನಾವಿಂದು ಹೆಚ್ಚೆಚ್ಚು ಅರಿಯಬೇಕಾಗಿದೆ. ಒಟ್ಟಿನಲ್ಲಿ ಆಹಾರವನ್ನು ಹಂಚಿತಿನ್ನುವ ಪಂಕ್ತಿಸೇವೆಗೆ ಬಸವಣ್ಣನೇ ಮೂಲವಾಗಿದ್ದಾನೆ.

ಬೊಪ್ಪೇಗೌಡನಪುರದಲ್ಲಿ ನಡೆಯುವ ಜಾತ್ರೆಯಲ್ಲಿಯೂ ಜಾತ್ರೆಯ ನಾಲ್ಕನೇ ದಿನದಂದು ಪಂಕ್ತಿಸೇವೆ ಎಂಬ ಆಚರಣೆ ನಡೆಯುತ್ತದೆ. ಇಲ್ಲಿನ ಪಂಕ್ತಿಸೇವೆಯಲ್ಲಿ ಮುಖ್ಯವಾಗಿ ಸಸ್ಯಾಹಾರವೇ ಇರುತ್ತದೆ. ಮಠದ ವತಿಯಿಂದಲೇ ಆಹಾರ ಸಿದ್ಧಪಡಿಸಿ ಮಠದ ಸುತ್ತ ಭಕ್ತಾದಿಗಳನ್ನು ಕೂರಿಸಿ ಊಟ ಬಡಿಸುತ್ತಾರೆ. ಕಜ್ಜಾಯ, ಬಾಳೇಹಣ್ಣು ಒಬ್ಬಟ್ಟು ಹೀಗೆ ವಿಶೇಷವಾಗಿ ಸಿಹಿ ಪದಾರ್ಥಗಳನ್ನೇ ಬಳಸುತ್ತಾರೆ. ಕಜ್ಜಾಯವನ್ನು ವಿಶೇಷವಾಗಿ ಬಡಿಸಲಾಗುತ್ತದೆ. ಇದನ್ನೇ ಇಲ್ಲಿ ಪಂಕ್ತಿಸೇವೆ ಎಂದೂ ಕರೆಯುತ್ತಾರೆ. ಆದರೆ ಚಿಕ್ಕಲೂರು ಇದೇ ಸಂಪ್ರದಾಯದಲ್ಲಿ ಸೇರಿದ್ದರೂ ಅಲ್ಲಿ ಇಂದಿಗೂ ಅವ್ಯಾಹತವಾಗಿ ಮಾಂಸಾಹಾರವೇ ಪಂಕ್ತಿಸೇವೆಯಾಗಿದೆ "ಮಂಟೇಸ್ವಾಮಿ ಬೊಪ್ಪಣಪುರದಲ್ಲಿ ನೆಲೆ ನಿಂತಾಗ ಸಿದ್ದಪ್ಪಾಜಿ, ರಾಚಪ್ಪಾಜಿ ಮುಂತಾದ ಶಿಷ್ಯರೆಲ್ಲರೂ ಒಟ್ಟಾಗಿ ಸೇರಿ ಸಹಭೋಜನ ಮಾಡುತ್ತಿದ್ದರಂತೆ ಇದನ್ನೇ ಪಂಕ್ತಿಸೇವೆ" [4] ಎಂಬುದಾಗಿ ಕರೆಯುತ್ತಾರೆ. ಇದು ಬಸವಣ್ಣನ ಶರಣ ಸಂಸ್ಕೃತಿಯು ಪರಂಪರೆಗೆ ಕೊಟ್ಟ ಬಹುದೊಡ್ಡ ಅತೀ ಮುಖ್ಯ ಕೊಡುಗೆಯಾಗಿದೆ.

ಸಿದ್ದಪ್ಪಾಜಿ ಹಲಗೂರಿನಲ್ಲಿ ಪಾಂಚಾಳದವರನ್ನು ಸೋಲಿಸಿ ಮಂಟೇಸ್ವಾಮಿಯ ಬಳಿ ಕರೆತಂದು ನೀಲಗಾರರನ್ನು ಮಾಡಿ ಒಕ್ಕಲಾಗಿಸಿ ಅವರಿಂದ ಕಬ್ಬಿಣದ ಭಿಕ್ಷೆ ತರುತ್ತಾರೆ. ಆಗ ಬೊಪ್ಪೇಗೌಡನಪುರಕ್ಕೆ ಬಂದ ಪಾಂಚಾಳದವರಿಗೆ ಮಂಟೇಸ್ವಾಮಿ ತಾನೇ ಮುಂದೆ ನಿಂತು ಅಡುಗೆ ಮಾಡಿಸಿ ಊಟ ಹಾಕಿಸುತ್ತಾರೆ. ವಿವಿಧ ರೀತಿಯ ಅಡುಗೆಗಳನ್ನು ಮಾಡಿಸುತ್ತಾರೆ. ಹಿಂದೆ ಹೇಳಿದಂತೆ ಸಿದ್ದಪ್ಪಾಜಿ, ರಾಚಪ್ಪಾಜಿ ಹೀಗೆ ಎಲ್ಲರೂ ಕುಳಿತು ಊಟ ಮಾಡುತ್ತಿದ್ದ ಪಂಕ್ತಿಯಲ್ಲಿಯೇ ಅವರಿಗೆ ಊಟ ಹಾಕಲಾಗುತ್ತದೆ. ಆದರೆ ಈ ಪಾಂಚಾಳದವರು ಸಿರಿತನದಿಂದ ಬೆಳೆದವರು ಪಂಕ್ತಿಯಲ್ಲಿ ಹಾಕಿದ್ದ ಊಟ ನೋಡಿ

ನಾವು ಊಟವನ್ನೆ ಮಾಡುತ್ತಿದ್ದ
ಅಕ್ಕಿಯ ನೋಡಿದರೆ
ತಲೆಗೂದಲಿಗಿಂತ ಸಣ್ಣಗಿತ್ತು
ಆನೆ ಬೇಯ್ಸಾಕೊ ಅಕ್ಕಿ
ಬೇಯಿಸ್ಕೊಂಬಂದು ನಮ್ಮ ಅಗಲಿಗೆ
ನೀಡುತವ್ರೆ ನೋಡಿರಯ್ಯ
ಹಪ್ಪಳ ಅಂತ ನೀಡುತವ್ರೆ
ಅಳ್ಳಿ ತರಗ ಕಾಣಿರಯ್ಯ
ಮಾಗಡಿ ಬೇರು ಅಂತ ನೀಡವ್ರೆ
ಯಾತ್ಯಾತರದೋ ಬೇರ ನೋಡಿ
ಸ್ವಾಮಿ ಪರಸಾದ ಅಂತ
ನೀಡವ್ರೆ ನೋಡಿರಯ್ಯ
ಕೆರೆ ಒಳಗಲ ಹುಳಿನಂಗದೆ
ಈ ಹಪ್ಪಳುಪ್ಪಿನಕಾಯಿ
ಹಲಸು ಬಾಳೆಹಣ್ಣು
ತಾಳದ ಮೇಲೊಗ್ರನಾದ್ರೆ
ಈ ತ್ವಾಳಕ್ಕೆ ಪರಸಾದ
ನಮ್ಮ ಗಂಟಲಲ್ಲಿ ಸಿಕ್ವಾಕಿಕೊಂಡು
ಪ್ರಾಣವಾದರೆ ಹೋಗಿ ಬಿಟ್ಟರೆ
ಮಂಟೇದಲಿಂಗಯ್ಯ ಬಂದು
ನಮ್ಮ ಪ್ರಾಣ ಕಾಯಬಲ್ನೆ[5]

ಎಂದು ಅವರು ಊಟ ಮಾಡದೆ ಹಲಗೂರಿಗೆ ಹೊರಟು ಹೋಗುತ್ತಾರೆ. ಆಗ ಸಿದ್ದಪ್ಪಾಜಿ ಅವರು ಅಹಂಕಾರವು ಇನ್ನು ಹೋಗಲಿಲ್ಲವಲ್ಲ ಎಂದು ಕೊಂಡು ಮತ್ತೆ ಮಾರಿಯರನ್ನು ಕರೆದು ಹಲಗೂರಿಗೆ ನುಗ್ಗಿಸುತ್ತಾರೆ. ಆಗ ಮತ್ತೆ ತೊಂದರೆ ಅನುಭವಿಸಿದ ಪಾಂಚಾಳರು ವಿಧಿಯಿಲ್ಲದೆ ಬಂದು ಮಂಟೇಸ್ವಾಮಿಗೆ ಶರಣಾಗುತ್ತಾರೆ. ಮತ್ತೆ ಮಂಟೇಸ್ವಾಮಿ ಊಟ ಸಿದ್ಧಪಡಿಸಿ ಪಂಕ್ತಿ ಊಟ ಹಾಕಿಸುತ್ತಾರೆ .ಆಗ ಅವರಿಗೆ ಹಾಕುವ ಊಟ

ಮುದಾಲೆಸೊಪ್ಪು ಮುಗ್ಗಲು ಹುಳ್ಳಿ
ಹಾಕಿಸಿದರು ಧರ್ಮಗುರುವು
ಒಬ್ಬೊಬ್ಬರ ಅಗಲಿಗಾಗ
ಉಪ್ಪೆಸರನ್ನೆ ಬಡಿಸಿದಾಗ
ಒಬ್ಬೊಬ್ಬರ ಅಗಲಿಗಾದರೆ
ಎರಡೆರಡು
ಹಸೀಮೆಣಸಿನಕಾಯ ಹಾಕಿಸಿದರು[6]

ಆದರೆ ಅದನ್ನೇ ಮಹಾಪ್ರಸಾದವೆಂದು ಪಾಂಚಾಳರು ಸ್ವೀಕರಿಸಿದರು. ಪಂಕ್ತಿಸೇವೆಯಲ್ಲಿ ಏನೇ ಹಾಕಿದರೂ ಪ್ರಸಾದವೆಂದು ಸ್ವೀಕರಿಸಬೇಕೆಂಬ ಸತ್ಯವನ್ನು ಇದು ಹೇಳುತ್ತದೆ. ಹೀಗೆ ಬೊಪ್ಪಗೌಡನಪುರದ ಪಂಕ್ತಿ ಸೇವೆ ಮಂಟೇಸ್ವಾಮಿಯಿಂದಲೇ ಪ್ರಾರಂಭವಾಗಿರುತ್ತದೆ.

ಚಿಕ್ಕಲ್ಲೂರು ಜಾತ್ರೆಯೆಂದರೆ ಅಲ್ಲಿ ನಡೆಯುವ ಬಾಡೂಟದ ಪಂಕ್ತಿಸೇವೆಯೇ ಮುಖ್ಯ ಆಚರಣೆ. ಭಕ್ತರು ದೇವಸ್ಥಾನದ ಸುತ್ತಮುತ್ತಲ ಜಮೀನುಗಳಲ್ಲಿ ಬಿಡಾರ ಹೂಡಿ ಕುರಿ ಕೋಳಿ ಕತ್ತರಿಸಿ ಮಾಂಸಾಹಾರ ಸಿದ್ಧಪಡಿಸಿ ನೆಂಟರಿಷ್ಟರು, ಆಪ್ತರು, ನೆರೆಹೊರೆ ಮನೆಯವರು ಒಂದೆಡೆ ಸೇರಿ ಜೊತೆಗೆ ಬರುವ ಭಕ್ತಾದಿಗಳನ್ನು ಪಂಕ್ತಿಯಲ್ಲಿ ಕೂರಿಸಿ ಬಾಡೂಟವನ್ನು ಬಡಿಸಿ ದೇವರಿಗೆ ಅರ್ಪಿಸಿ ಸಂಭ್ರಮಿಸುವುದು ಜೊತೆಗೆ ಸಂಪ್ರದಾಯದಿಂದ ಬಂದಿರುವ ಧಾರ್ಮಿಕ ವಿಧಿಯನ್ನು ಪೂರೈಸುವುದೇ 'ಪಂಕ್ತಿಸೇವೆ'. ಇದೂ ಕೂಡ ಪ್ರತಿಭಟನಾತ್ಮಕ ಆಚರಣೆಯೇ. ಬಸವಣ್ಣ ಮಹಾಮನೆಯಲ್ಲಿ ಸಸ್ಯಾಹಾರಕ್ಕಷ್ಟೇ ಅವಕಾಶ ನೀಡಿದ್ದರೂ ಆತ ಮಾಂಸಾಹಾರವನ್ನು ತಿರಸ್ಕರಿಸುವುದಿಲ್ಲ. ಆದರೆ ಮುಂದೆ ಬಸವಣ್ಣನ ತತ್ವಕ್ಕೆ ಸಸ್ಯಾಹಾರವೂ ಸೇರಿಕೊಂಡದ್ದರಿಂದ ನಿಜವಾದ ಶರಣ ತತ್ವವನ್ನು ಮತ್ತೆ ಪುನಸ್ಥಾಪಿಸಲು ಮುಂದಾದ ಮಂಟೇಸ್ವಾಮಿ, ಮಾದೇಶ್ವರ ಮುಖ್ಯವಾಗಿ ತಳಸಮುದಾಯವನ್ನು ತಲುಪಿದರು. ಮಾಂಸಾಹಾರಕ್ಕೂ ಪ್ರಾಧಾನ್ಯ ನೀಡಿದರು. ಹಿಂದೆ ಮಾದೇಶ್ವರ ಬೆಟ್ಟಕ್ಕೆ ತೆರಳುವ ಭಕ್ತರು ಮಾಂಸವನ್ನು ತೆಗೆದುಕೊಂಡು ಹೋಗುತ್ತಿದ್ದರು. ಅದಕ್ಕೆ ಮಡಿ ಮೈಲಿಗೆ ಎಂದಿರಲಿಲ್ಲ. ಆದರೆ ಇತ್ತೀಚೆಗೆ ಅದಕ್ಕೂ ಮಡಿ ಮೈಲಿಗೆ ಅಂಟಿಕೊಂಡಿದೆ. ಬೆಟ್ಟಕ್ಕೆ ಹೋಗುವವರು ಮಾಂಸ ಸೇವಿಸಿಯೇ ಹೋಗಬಾರದೆಂದು ಅಘೋಷಿತ ನಿಯಮ ಜಾರಿಗೊಳಿಸಲಾಗಿದೆ.

ಆದರೆ ಚಿಕ್ಕಲ್ಲೂರಿನಲ್ಲಿ ಅಲ್ಲಿಯೇ ಮರಿ, ಕುರಿ, ಕೋಳಿ ಕಡಿದು ಮಾಂಸಾಹಾರ ಮಾಡಿ ಪಂಕ್ತಿಸೇವೆ ಮಾಡುತ್ತಾರೆ. ಆದರೆ ಇದು ಪ್ರಾಣಿ ಬಲಿ ಎಂದು ಕೆಲವರು ಕೋರ್ಟಿನ ಮೊರೆ ಹೋದ ಕಾರಣದಿಂದ ಕಟ್ಟು ನಿಟ್ಟಾಗಿ ಇಲ್ಲಿ ಪ್ರಾಣಿಗಳನ್ನು ಕಡಿಯುವುದನ್ನು ಜಿಲ್ಲಾಡಳಿತ ತಡೆಗಟ್ಟಿದೆ. ಆದರೆ ಇದೊಂದು ಆಚರಣೆ ಸಂಪ್ರದಾಯ ಎಂಬುದು ಗಮನಿಸತಕ್ಕ ವಿಚಾರ. ಈ ಬಗ್ಗೆ ಕೋರ್ಟ್ ನೀಡಿರುವ ಆದೇಶ ಮೂರು ಮುಖ್ಯ ವಿಚಾರಗಳನ್ನು ತಿಳಿಸುತ್ತದೆ.

ಮೊದಲನೆಯದು ದೇವಸ್ಥಾನದ ಆವರಣದಲ್ಲಿ ಪ್ರಾಣಿಬಲಿ ನೀಡಬಾರದು.
ಎರಡನೆಯದು ಭಕ್ತರ ಭಾವನೆಗಳಿಗೂ ನೋವುಂಟು ಮಾಡಬಾರದು.
ಮೂರನೆಯದು ಮಾಂಸಾಹಾರದ ಸಹಪಂಕ್ತಿ ಭೋಜನಕ್ಕೆ ಅಡ್ಡಿಪಡಿಸಬಾರದು.

ಅಂದರೆ ಇದರಲ್ಲಿ ಮಾಂಸಾಹಾರ ಸೇವನೆಗೆ, ಪಂಕ್ತಿ ಸೇವೆಗೆ ಯಾವುದೇ ಅಡ್ಡಿಯಿಲ್ಲ. ಆದರೆ ಪ್ರಾಣಿಬಲಿ ನೀಡಬಾರದು. ವಾಸ್ತವವಾಗಿ ದೇವಸ್ಥಾನದ ಆವರಣದಲ್ಲಿ ಭಕ್ತರು ಪ್ರಾಣಿಗಳನ್ನು ಕತ್ತರಿಸುವುದು ಬಲಿರೂಪದಲ್ಲಿ ಅಲ್ಲ. ಆಹಾರವನ್ನು ತಯಾರಿಸಲು ಕಡಿಯುತ್ತಾರೆ. ಸಹಜವಾಗಿ ದೇವಸ್ಥಾನದ ಆವರಣದಲ್ಲಿ ಕಡಿಯುವುದರಿಂದ ದೇವಸ್ಥಾನದ ತೀರ್ಥ, ಪೂಜೆ ಸಹಜವಾಗಿ ಇರುತ್ತದೆ. ವಾಸ್ತವವಾಗಿ ಬಲಿ ನೀಡಬೇಕೆಂದರೆ ದೇವಸ್ಥಾನದಲ್ಲಿ ಅದಕ್ಕೆಂದೇ ಬಲಿಪೀಠ ಇರುತ್ತದೆ. ಹಲವು ದೇವಸ್ಥಾನಗಳಲ್ಲಿ ಇಂತಹ ಬಲಿಪೀಠಗಳನ್ನು ಕಾಣಬಹುದು. ಇವುಗಳು ಪ್ರಾಣಿಗಳ ಬಲಿಗೆಂದೇ ಮೀಸಲಾಗಿರುತ್ತದೆ. ಚಿಕ್ಕಲ್ಲೂರಿನಲ್ಲಿ ನಡೆಯುವುದು ಬಲಿಯಲ್ಲ, ಆಹಾರಕ್ಕಾಗಿ, ಭಕ್ತಾದಿಗಳಿಗೆ ಪಂಕ್ತಿಸೇವೆ ಮಾಡುವುದಕ್ಕಾಗಿ ಪ್ರಾಣಿಗಳನ್ನು ಕಡಿಯಲಾಗುತ್ತದೆ.

ಆದರೆ ಇದು ಬಲಿಯೆಂದೇ ಪರಿಗಣಿಸಿರುವ ಜಿಲ್ಲಾಡಳಿತವು ದೇವಸ್ಥಾನದ ಆವರಣದಲ್ಲಿ ಪ್ರಾಣಿಬಲಿ ನಿಷೇಧಿಸುವುದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿಯೇ ಸುಮಾರು 8–10 ಕಿ.ಮೀ ದೂರದಲ್ಲಿಯೇ ಪೊಲೀಸರನ್ನು ನೇಮಿಸಿ ಬರುವ ವಾಹನಗಳ ತಪಾಸಣೆ ಮಾಡಿ ಪ್ರಾಣಿಗಳನ್ನು ಕೊಂಡೊಯ್ಯದಂತೆ ನೋಡಿಕೊಳ್ಳುತ್ತಾರೆ. ಕುರಿ, ಕೋಳಿ ಕಂಡರೆ ಅವುಗಳನ್ನು ವಶಪಡಿಸಿಕೊಳ್ಳುತ್ತಾರೆ. ಹಾಗೆ ನೋಡಿದರೆ ಇದು ತಪ್ಪು ಕ್ರಮವಾಗಿದೆ. ಅದು ಕೇವಲ ದೇವಸ್ಥಾನದ ವ್ಯಾಪ್ತಿಗೆ ಸಂಬಂಧಪಟ್ಟ ನ್ಯಾಯಾಲಯದ ಆದೇಶವಾಗಿರುವುದರಿಂದ ಅಲ್ಲಿ ಮಾತ್ರವೇ ಆ ತರಹದ ಕ್ರಮಕ್ಕೆ ಜಿಲ್ಲಾಡಳಿತ ಮುಂದಾಗಬೇಕೇ ಹೊರತು ಅದನ್ನು 8–10 ಕಿ.ಮೀ. ವ್ಯಾಪ್ತಿಗೆ ವಿಸ್ತರಿಸುವುದಲ್ಲ. ಮುಖ್ಯವಾಗಿ ಈ ವಿಚಾರದಲ್ಲಿ ಕೆಲವು ಸ್ಪಷ್ಟ ತೀರ್ಮಾನಗಳು ಆಗ ಬೇಕಿದೆ.

1. ಇದು ಬಲಿಯಲ್ಲ ಇದೊಂದು ಆಹಾರ ಪದ್ಧತಿ
2. ದೇವಸ್ಥಾನದ ಮುಂದೆ ಪ್ರಾಣಿಗಳನ್ನು ಕಡಿಯುವುದಿಲ್ಲ, ಹೊರಭಾಗದಲ್ಲಿ ಎಲ್ಲೋ ಹೊಲ ಗದ್ದೆಗಳಲ್ಲಿ ಕಡಿಯಲಾಗುತ್ತದೆ
3. ಇದಕ್ಕಾಗಿ ನಿರ್ದಿಷ್ಟ ಜಾಗವನ್ನು ಗೊತ್ತುಮಾಡಿ ಅಲ್ಲಿ ಈ ಸಂಪ್ರದಾಯ ನಡೆಯುವಂತೆ ಮಾಡಬಹುದು
4. ಇಲ್ಲಿ ಮೌಢ್ಯತೆ ಇಲ್ಲ ಬದುಕಿನ ನೀತಿಯಿದೆ. ಪ್ರೀತಿಯಿದೆ.
5. ಇದು ತಳವರ್ಗದವರ ಧಾರ್ಮಿಕ ಕ್ಷೇತ್ರ, ಅವರ ಭಾವನೆಗಳ ಅಭಿವ್ಯಕ್ತಿ ಈ ದೇವಸ್ಥಾನ. ಆದ್ದರಿಂದ ಅವರ ಆಚರಣೆಗಳಿಗೆ ಅಡ್ಡಿಯಾಗಬಾರದು
6. ಮಾಂಸಾಹಾರ ಕೆಟ್ಟ ಆಚರಣೆಯಲ್ಲ, ಕೆಟ್ಟದ್ದಲ್ಲ, ಅನಿಷ್ಟವಲ್ಲ, ಮೌಢ್ಯತೆಯಲ್ಲ, ಹಿಂಸೆಯಲ್ಲ, ಮಾನವನ ಬದುಕಿನ ಕ್ರಮಗಳಲ್ಲಿ ಒಂದು

ಪ್ರಸ್ತುತ ಭಕ್ತರು ಮನೆಗಳಲ್ಲಿಯೇ ಬಾಡೂಟವನ್ನು ತಯಾರಿಸಿ ತಂದು ಪಂಕ್ತಿಸೇವೆ ಮಾಡುತ್ತಿದ್ದಾರೆ. ಕೆಲವರು ಮಾಂಸವನ್ನು ತಂದು ತಾವು ಹಾಕುವ ಬಿಡಾರಗಳಲ್ಲಿಯೇ ಬಾಡೂಟ ತಯಾರಿಸುತ್ತಾರೆ. ಬಾಡೂಟದ ಪಂಕ್ತಿಸೇವೆಯಂತೂ ನಿಂತಿಲ್ಲ. ಆದರೆ ಇಲ್ಲಿ ಪ್ರಾಣಿಗಳನ್ನು ಕಡಿಯುವುದು ನಿಂತಿದೆಯಷ್ಟೇ. ಇದನ್ನು ಅರಿತು ಬಾಡೂಟದ ಪಂಕ್ತಿಸೇವೆಗೆ ಪ್ರಾಣಿಗಳನ್ನು ಕಡಿಯಲು ಅವಕಾಶ ಮಾಡಿಕೊಟ್ಟರೆ ತಪ್ಪೇನೂ ಆಗುವುದಿಲ್ಲ. ಪ್ರತಿವರ್ಷ ಈ ವಿಷಯವಾಗಿ ಹೋರಾಟಗಳು ನಡೆಯುತ್ತಿವೆ. ಪರ ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಸಿದ್ದಪ್ಪಾಜಿಗೆ ನಡೆದುಕೊಳ್ಳುವವರು ಹೆಚ್ಚಾಗಿ ಮಾಂಸಾಹಾರಿಗಳೇ ಆಗಿದ್ದಾರೆ. ಸಸ್ಯಾಹಾರಿಗಳೂ ಬೇಕಾದಷ್ಟು ಮಂದಿ ಇದ್ದಾರೆ. ಆದ್ದರಿಂದ ಅನೇಕರು ಹರಕೆ ಹೊತ್ತು ಮರಿ ಬಿಟ್ಟು ಜಾತ್ರೆಯ ದಿನ ನೆಂಟರನ್ನು ಚಿಕ್ಕಲ್ಲೂರಿಗೆ ಕರೆದುಕೊಂಡು ಹೋಗಿ ತಂಗಿದ್ದು ಅಲ್ಲಿಯೇ ಕುರಿ ಕೋಳಿ ಕಡಿದು ಮಾಂಸಾಹಾರ ಮಾಡಿ ಪಂಕ್ತಿಸೇವೆ ಮಾಡಿ ತಾವು ತೃಪ್ತರಾಗಿ ದೇವರನ್ನೂ ತೃಪ್ತಿ ಪಡಿಸಿದ ಸಂಭ್ರಮದಲ್ಲಿರುತ್ತಿದ್ದರು. ಆದರೆ ಇದರ ನಿಷೇಧದಿಂದ ದೇವರು ಬೇಸರಗೊಂಡಿದ್ದಾನೋ ಇಲ್ಲವೋ ಭಕ್ತರು ಮಾತ್ರ ಬೇಸರಗೊಂಡಿದ್ದಾರೆ. ಒಂದೆಡೆ ದೇವರಿಗೆ ಮಾಡುತ್ತಿದ್ದ ಸೇವೆ ನಿಂತು ಹೋಯಿತಲ್ಲ ಅಂದುಕೊಂಡರೆ ಜಾತ್ರೆಯ ಆ ಸವಿ ಇಲ್ಲವಾಗಿದೆ.

ಬಾಡೂಟದ ಪಂಕ್ತಿಸೇವೆ ಇದ್ದ ಕಾರಣ ಚಿಕ್ಕಲ್ಲೂರಿಗೆ ಹೋಗಿ ಅಲ್ಲಿಯೇ ಐದಾರು ದಿನಗಳ ಕಾಳ ತಂಗಿದ್ದು ಜಾತ್ರೆಯ ಸಂಭ್ರಮದಲ್ಲಿ ಪೂರ್ಣವಾಗಿ ಪಾಲ್ಗೊಳ್ಳುತ್ತಿದ್ದರು. ಜೊತೆಗೆ ತಂಗುವುದಕ್ಕಾಗಿ ಬಿಡಾರಗಳನ್ನು ಹಾಕುತ್ತಿದ್ದರು. ಆದರೆ ಬಾಡೂಟದ ನಿಷೇಧದಿಂದ ಅಲ್ಲಿಗೆ ಹೋಗುವವರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಜೊತೆಗೆ ಬಿಡಾರಗಳನ್ನು ಹಾಕಿ ತಂಗುತ್ತಿದ್ದವರ ಸಂಖ್ಯೆಯೂ ಕಡಿಮೆಯಾಗಿದೆ.

ಒಂದು ಪರಂಪರೆ ಮತ್ತು ಸಂಪ್ರದಾಯಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗಿದೆ. ಮಾದೇಶ್ವರ ಮಂಟೇಸ್ವಾಮಿ ಕೆಳಸಮುದಾಯಕ್ಕೆ ಸೇರಿದವರು. ಅವರು ಸೇರಿದ್ದು ಕೆಳಸಮುದಾಯವನ್ನೇ ಅವರ ಆಹಾರ ಪದ್ಧತಿ ಯಾವುದೇ ಆದರೂ ಅವರು ಮಾಂಸಾಹಾರವನ್ನು ಕಡಾಖಂಡಿತವಾಗಿ ತಿರಸ್ಕರಿಸಿದಂತೆ ಕಾಣುವುದಿಲ್ಲ. ಆದ್ದರಿಂದ ಭಕ್ತರು ತಮ್ಮ ದೇವರಿಗೆ ಮಾಂಸಾಹಾರ ಹೆಂಡವನ್ನೇ ಅರ್ಪಿಸುತ್ತಾ ಬರುತ್ತಿದ್ದುದುಂಟು. ಆದರೆ ಪ್ರಾಣಿಬಲಿ ನಿಷೇಧದ ಕಾರಣ ಈ ಪರಂಪರೆ ನಶಿಸಿ ಮತ್ತೆ ಸಸ್ಯಾಹಾರ ಸಾತ್ವಿಕ ಪೂಜೆ ಬಂದಿದೆ. ಇದು ಮತ್ತೆ ಹಿಂದಿನ ದೇವಾಲಯ ಸಂಸ್ಕೃತಿಗೆ ಹೋಗುತ್ತಿದೆ. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಬಸವಣ್ಣನ ಮಾತು ಬದಲಾಗಿ ಹೋಗುತ್ತಿದೆ. ಜಂಗಮ ಸ್ವರೂಪ ಹೋಗಿ ಸ್ಥಾವರ ಸ್ವರೂಪ ಬರುತ್ತಿದೆ.

ದೇವರಿಗೆ ಮಾಂಸಾಹಾರ ಅರ್ಪಿಸುವ ಪದ್ಧತಿ ಅನೇಕ ಕಡೆ ಚಾಲ್ತಿಯಲ್ಲಿದೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಹತ್ತಿರವಿರುವ ಮಾದೇಹಳ್ಳಿಯಲ್ಲಿ ಶ್ರೀ ಲಕ್ಷ್ಮಿನರಸಿಂಹಸ್ವಾಮಿ ದೇವಾಲಯವಿದ್ದು ಅಲ್ಲಿ ಮೇ ಇಲ್ಲವೇ ಜೂನ್ ತಿಂಗಳಲ್ಲಿ ರಥೋತ್ಸವ ಜರುಗುತ್ತದೆ. ವಿಶೇಷವೆಂದರೆ ರಥೋತ್ಸವದ ಕೊನೆಯ ದಿನ ಹರಿಜನರಿಗೆ ಮೀಸಲು. ಅಂದು ಹಿಟ್ಟು ಸೊಪ್ಪಿನ ಸೇವೆಯನ್ನು ಹರಿಜನರು ಮಾಡುತ್ತಾರೆ. "ಸ್ವಾಮಿಯ ಜಾತ್ರಾ ಮಹೋತ್ಸವದ ಪ್ರಾರಂಭದ ದಿನದಿಂದಲೂ ಭಕ್ಷ್ಯ ಭೋಜನಗಳನ್ನು ಸವಿದು ಬೇಸತ್ತು ನನಗೆ ಹರಿಜನರ ಮನೆಯ ಹಿಟ್ಟು ಸೊಪ್ಪು ಬೇಕೆಂದು ಒಮ್ಮೆ ಬೇಡಿಕೊಂಡನಂತೆ. ಅದರಂತೆ ಈಗಲೂ ಹರಿಜನರು ಕೊನೆಯ ದಿನ ಶುದ್ಧವಾದ ರಾಗಿಹಿಟ್ಟು ಕೀರೇಸೊಪ್ಪು ತಂದು ಒಪ್ಪಿಸುತ್ತಾರೆ.

ಅದನ್ನು ಅಲ್ಲಿಯ ಅರ್ಚಕರು ಸಿದ್ದಪಡಿಸಿ ನೈವೇದ್ಯ ಮಾಡುತ್ತಾರೆ. ಮತ್ತೆ ಅಲ್ಲಿ ನೆರೆದಿರುವ ಎಲ್ಲಾ ಭಕ್ತಾದಿಗಳಿಗೆ ಅದನ್ನು ಉಣಬಡಿಸುತ್ತಾರೆ'[7] ಇಲ್ಲಿ ಮುಖ್ಯವಾಗಿ ಗಮನಿಸತಕ್ಕ ವಿಚಾರವೆಂದರೆ ಹರಿಜನರ ಸೇವೆಯನ್ನು ಬ್ರಾಹ್ಮಣರು ಕಿತ್ತುಕೊಂಡಿರುವುದು. ಹಿಂದೆ ಹರಿಜನರು ತಾವೇ ಮುದ್ದೆ ಸೊಪ್ಪಿನ ಸಾರು ಮಾಡಿ ತಮ್ಮ ಆಹಾರ ಸಂಸ್ಕೃತಿಯ ಪ್ರಕಾರವೇ ತಮ್ಮ ಆಹಾರವನ್ನೇ ದೇವರಿಗೆ ಅರ್ಪಿಸಿ ಬರುವ ಭಕ್ತಾದಿಗಳಿಗೆ ಅರ್ಪಿಸುತ್ತಿದ್ದರು. ಮೊದಮೊದಲು ಕೆಳವರ್ಗದ ಜನರೇ ಅಲ್ಲಿಗೆ ಬರುತ್ತಿದ್ದ ಕಾರಣದಿಂದ ಯಾವುದೇ ಸಮಸ್ಯೆ ಇರಲಿಲ್ಲ. ಆದರೆ ಬರಬರುತ್ತಾ ಅಲ್ಲಿಗೆ ಬೇರೆ ಜನಾಂಗದವರ ಅಂದರೆ ಹರಿಜನರಿಗಿಂತ ಮೇಲು ವರ್ಗದವರ ಪ್ರವೇಶ ಹೆಚ್ಚಾದಾಗ, ಅವರ ಕೈ ಮೇಲಾದಾಗ ಅವರು ಹರಿಜನರು ದೇವರಿಗೆ ನೇರವಾಗಿ ಅರ್ಪಿಸುತ್ತಿದ್ದ ಸೇವೆಯನ್ನು ನಿಲ್ಲಿಸಿ ರಾಗಿ ಹಿಟ್ಟು ಸೊಪ್ಪನ್ನು ದೇವಸ್ಥಾನಕ್ಕೆ ಕೊಟ್ಟು ಮಡಿಯಾಗಿ ನಂತರ ಆಹಾರ ತಯಾರಾಗಿ ಭಕ್ತಾದಿಗಳಿಗೆ ಕೊಡುವ ಸಂಪ್ರದಾಯ ಬಂದಿದೆ. ಮಾದೇಶ್ವರನ ಬೆಟ್ಟದಲ್ಲಿಯೂ ಹೀಗೆಯೇ ಆಗಿದೆ. ಉಪ್ಪಾರ ಜನಾಂಗದವರು ಮೊದಮೊದಲು ತಾವೇ ಗರ್ಭಗುಡಿಗೆ ಹೋಗಿ ಲಿಂಗದ ಮೇಲೆ ತಮ್ಮ ಕೈಯಿಂದ ಎಳ್ಳನ್ನು ತೀಡಿ ಎಣ್ಣೆ ಹಿಂಡಿ ಲಿಂಗ ತೊಳೆದು ಎಣ್ಣೆ ಮಜ್ಜನ ಮಾಡಿಸಿ ಪೂಜಿಸುತ್ತಿದ್ದರು. ಆಕಸ್ಮಿಕವಾಗಿ ಒಂದೆರಡು ವರ್ಷ ಈ ಹರಕೆ ನಿಂತು ಹೋದಾಗ ಅಲ್ಲಿನ ಅರ್ಚಕರು ಆ ಸಮಯದಲ್ಲಿ ಅದನ್ನು ಮುಂದುವರೆಸಿದರು. ಮತ್ತೆ ಉಪ್ಪಾರರು ತಮ್ಮ ಹಕ್ಕನ್ನು ಪ್ರತಿಪಾದಿಸಿದಾಗ 'ಗರ್ಭಗುಡಿಗೆ ತಮಗೆ ಬಿಟ್ಟು ಬೇರೆಯವರಿಗೆ ಪ್ರವೇಶವಿಲ್ಲ. ಬೇಕಾದರೆ ಎಳ್ಳು ತಂದು ಕೊಡಿ ತಾವೇ ಅರ್ಪಿಸುತ್ತೇವೆ' ಎಂದು ಹೇಳಿದರು. ಕೊನೆಗೆ ಅದು ಕೋರ್ಟಿನ ಕಟಕಟೆಗೆ ಏರಿ ಈಗ ಮುಜರಾಯಿ ಇಲಾಖೆಯಿಂದಲೇ ಆ ಸೇವೆ ನಡೆಯುತ್ತಿದೆ. ಇಂತಹದೇ ವ್ಯವಸ್ಥೆ ಈಗ ಚಿಕ್ಕಲ್ಲೂರಿಗೂ ಬಂದಿದೆ. ಮಾಂಸ ತಿನ್ನುವ ಆಹಾರ ಪದ್ಧತಿಯವರು ತಾವೇ ಕುರಿ ಕೋಳಿ ಕಡಿದು ಅಡುಗೆ ಮಾಡಿ ದೇವರಿಗೆ ಅರ್ಪಿಸಿ ಭಕ್ತಾದಿಗಳಿಗೆ ಬಡಿಸುತ್ತಿದ್ದರು. ಈಗ ಶಿಷ್ಟತೆಯ ನೆಲೆಯಲ್ಲಿ ಬಲಿಗೆ ವಿರೋಧ ವ್ಯಕ್ತವಾಗಿ ಕಾನೂನು ಇಂದು ಅದನ್ನು ತಡೆಯಲಾಗುತ್ತಿದೆ. ಹರಕೆ ಹೊತ್ತವರು ಕುರಿ ಕೋಳಿಗಳನ್ನು ದೇವಸ್ಥಾನಕ್ಕೆ ಕೊಟ್ಟರೆ ಅವರು ಅದನ್ನು ಹರಾಜು ಮಾಡಿ ದುಡ್ಡನ್ನು ಹೆಚ್ಚಿಸಿಕೊಳ್ಳುತ್ತಾರೆ. ಹೀಗೆ ಚಿಕ್ಕಲ್ಲೂರಿನ ಪಂಕ್ತಿಸೇವೆ ಇಂದು ತನ್ನದೇ ಆದ ಸಮಸ್ಯೆ ಎದುರಿಸುತ್ತಿದೆ. ನನ್ನ ದೇವರು ನನ್ನಂತೆಯೇ ಇರಬೇಕು ಎಂದು ಬಯಸುವುದರಲ್ಲಿ ತಪ್ಪಿಲ್ಲ. ಮಾಂಸ ತಿನ್ನದವರು ಅಂದು ಅಲ್ಲಿಗೆ ಹೋಗುವುದು ಬೇಡ. ಆದರೆ ಪ್ರಾಚೀನವಾಗಿ ನಡೆದು ಕೊಂಡು ಬಂದಿರುವ ಪದ್ಧತಿಗೆ ಅಡ್ಡ ಏಕೆ? ಎಂಬುದು ಭಕ್ತಾದಿಗಳ ಪ್ರಶ್ನೆಯಾಗಿದೆ.

**ಕೊನೆಟಿಪ್ಪಣಿಗಳು**

1. ಜೀ.ಶಂ. ಪರಮಶಿವಯ್ಯ – ಶ್ರೀ ಮಂಟೇಸ್ವಾಮಿ ಇತರ ಕಥನ ಕಾವ್ಯಗಳು :: ಪು.ಸಂ. 146
2. ಡಾ. ಮ.ನ. ಜವರಯ್ಯ : ದಲಿತ ವರ್ಗದ ಶರಣರು ಒಂದು ಅಧ್ಯಯನ : ಪು.ಸಂ.3
3. ಡಾ. ಜಿ. ಆರ್. ತಿಪ್ಪೇಸ್ವಾಮಿ – ಪಾದ ಮೂಡ್ಯಾವ ಪರಿಪರಿ : ಪು.ಸಂ. 3
4. ಡಾ. ಕೃಷ್ಣೇಗೌಡ ಹುಸ್ಕೂರು– ಮಳವಳ್ಳಿ ತಾಲ್ಲೂಕಿನ ಜಾನಪದ ಜೀವನ : ಪು.ಸಂ 36
5. ಜೀ.ಶಂ. ಪರಮಶಿವಯ್ಯ – ಶ್ರೀ ಮಂಟೇಸ್ವಾಮಿ ಇತರ ಕಥನ ಕಾವ್ಯಗಳು: ಪು.ಸಂ. 239
6. ಅದೇ ; ಪು.ಸಂ. 246
7. ಡಾ. ಕೃಷ್ಣೇಗೌಡ ಹುಸ್ಕೂರು– ಮಳವಳ್ಳಿ ತಾಲ್ಲೂಕಿನ ಜಾನಪದ ಜೀವನ : ಪು.ಸಂ 10